# ಸನ್ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಸುಧಾರಣೆಯ ಪರ್ವ



ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪ್ರಮುಖಾಂಶಗಳು

"ಮತ್ತೊಮ್ಮೆ ಮೋದಿ ಸರ್ಕಾರ, ಈ ಬಾರಿ ನಾನೂರು ಗುರಿ"



# ಪಿಸಿ ಮೋಹನ್
# ಅವರ ಸಂದೇಶ

ಮಾನ್ಯ ಸಂಸತ್ ಸದಸ್ಯರು, ಬೆಂಗಳೂರು ಲೋಕಸಭಾ ಕ್ಷೇತ್ರ



2009 ರಿಂದ ಆರಂಭವಾಗಿ 15 ವರ್ಷಗಳ ಕಾಲ ನಿಮ್ಮ ಸಂಸತ್ ಸದಸ್ಯನಾಗಿ ಸೇವೆ ಸಲ್ಲಿಸುವ ಸದವಕಾಶ ನನಗೆ ದೊರೆತಿದೆ. ನಿಮ್ಮ ಅಚಲ ಬೆಂಬಲ ಮತ್ತು ಪ್ರೀತಿ ಯಾವುದೇ ದೇವರ ಆಶೀರ್ವಾದಕ್ಕೂ ಕಡಿಮೆಯಿಲ್ಲ. ಒಬ್ಬ ಪ್ರತಿನಿಧಿಯಾಗಿ ನಿಮ್ಮ ಆಕಾಂಕ್ಷೆ ಹಾಗೂ ವಿಶ್ವಾಸವನ್ನು ಕಾಪಾಡಿಕೊಳ್ಳಲು ನಾನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದೇನೆ.

ಬೆಂಗಳೂರಿನ ಮೂಲಸೌಕರ್ಯದ ಅಭಿವೃದ್ಧಿಗಾಗಿ ನಾನು ಅವಿರತವಾಗಿ ಶ್ರಮಿಸಿದ್ದೇನೆ. ಮುಖ್ಯವಾಗಿ ಸಾರ್ವಜನಿಕ ಸಾರಿಗೆಯ ಸುಧಾರಣೆಗೆ ಸುಸ್ಥಿತ ನಗರ ಸಾರಿಗೆ ನೀತಿಗಳನ್ನು ಅನುಷ್ಠಾನಗೊಳಿಸಲು ಒತ್ತು ನೀಡಿದ್ದೇನೆ. ಬೆಂಗಳೂರು ಉಪನಗರ ರೈಲು ಸಾರಿಗೆ ಯೋಜನೆಯ ಜಾರಿ, ನಮ್ಮ ಮೆಟ್ರೋಗೆ ವೇಗ, ನಗರದಾದ್ಯಂತ ರೈಲ್ವೆ ಯೋಜನೆಗಳ ಜಾರಿಗೆ ಹಾಗೂ ಸ್ಮಾರ್ಟ್ ಸಿಟಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ದುಡಿದಿದ್ದೇನೆ.

ನಮ್ಮ ದೂರದೃಷ್ಟಿ ಸ್ಪಷ್ಟವಾಗಿದೆ; ಕೈಗಾರಿಕೆ, ಆವಿಷ್ಕಾರ ಹಾಗೂ ಹೂಡಿಕೆಯಲ್ಲಿ ಬೆಂಗಳೂರನ್ನು ಮುಂಚೂಣಿಗೆ ತರುವುದು, ಹಾಗೆಯೇ ಶಿಕ್ಷಣ, ಉದ್ಯೋಗ ಮತ್ತು ಉದ್ಯಮಶೀಲತೆಯಲ್ಲಿ ಮತ್ತಷ್ಟು ಮುನ್ನಡೆ ಸಾಧಿಸುವುದು. ಸಾರಿಗೆ ಸಂಪರ್ಕ ಅಭಿವೃದ್ಧಿ, ಜೀವನ ಗುಣಮಟ್ಟದ ಸುಧಾರಣೆ ಹಾಗೂ ಸುಲಲಿತ ಉದ್ಯಮಕ್ಕಾಗಿ ಮೋದಿ ಸರ್ಕಾರ ಕೈಗೊಂಡ ಕ್ರಮಗಳಿಂದಾಗಿ ಬೆಂಗಳೂರು ಭಾರತದ ಪ್ರಮುಖ ನಗರವಾಗಿ ಹೊರಹೊಮ್ಮಲು ಸಾಧ್ಯವಾಗಿದೆ.

ಮುಂದಿನ ತಲೆಮಾರಿನ ನಗರ ಮೂಲಸೌಕರ್ಯ, ಸಾರಿಗೆ ವ್ಯವಸ್ಥೆಯ ಆಧುನೀಕರಣ, ಜೀವನ ಗುಣಮಟ್ಟದ ಏರಿಕೆ, ಮಹಿಳೆ ಹಾಗೂ ಯುವಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲು ಬಿಜೆಪಿ ಸರ್ಕಾರ ಬದ್ಧವಾಗಿದೆ. ನಿಮ್ಮ ಕನಸುಗಳೇ ನನ್ನ ಕನಸುಗಳು.

ಬೆಂಗಳೂರನ್ನು ಭಾರತದ ಮುಂಚೂಣಿ ನಗರವಾಗಿಸಿ ಯಶಸ್ವಿಯಾಗಿಸುವ ಈ ಸಹಯೋಗದ ಗುರಿಗೆ ನಾನು ನಿಮ್ಮ ಅಪಾರ ಬೆಂಬಲ ಮತ್ತು ಆಶೀರ್ವಾದವನ್ನು ವಿನಮ್ರತೆಯಿಂದ ಕೋರುತ್ತೇನೆ. ಹಾಗೆಯೇ ನಿಮ್ಮ ಅಮೂಲ್ಯ ಮತವನ್ನು ನನಗೆ ನೀಡಿ ಎಂದು ಮನವಿ ಮಾಡುತ್ತೇನೆ. ಈ ಮೂಲಕ ನಾವು ಒಂದಾಗಿ ಉಜ್ವಲ ಭವಿಷ್ಯವನ್ನು ರೂಪಿಸಬಹುದು. ಇದು ಕೇವಲ ಬೆಂಗಳೂರಿನ ಏಳಿಗೆಗಾಗಿ ಮಾತ್ರವಲ್ಲದೆ, ಪ್ರತಿ ಕುಟುಂಬದ ಅದರಲ್ಲೂ ವಿಶೇಷವಾಗಿ ಯುವ ಪೀಳಿಗೆಯ ಭವಿಷ್ಯ ನಿರ್ಮಾಣಕ್ಕೆ ಸಹಕಾರಿಯಾಗಲಿದೆ.

ನಾವೆಲ್ಲರೂ ಒಂದಾಗಿ ಬೆಂಗಳೂರನ್ನು ನಂಬರ್ ಒನ್ ನಗರವನ್ನಾಗಿ ರೂಪಿಸೋಣ.

ಇಂತಿ ತಮ್ಮ ವಿಶ್ವಾಸಿ

ಪಿ.ಸಿ.ಮೋಹನ್,
ಸಂಸತ್ ಸದಸ್ಯರು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ

# Political Timeline

### 1993
ಬಿಜೆಪಿಯ ಸದಸ್ಯನಾಗುವ ಮೂಲಕ ನನ್ನ ರಾಜಕೀಯ ಪ್ರಯಾಣವನ್ನು ಆರಂಭಿಸಿದೆ

### 1996
ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧೆ.

### 1999
ಮೊದಲ ಬಾರಿ ಕರ್ನಾಟಕ ವಿಧಾನಸಭೆಗೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ

### 2004
ಬಿಜೆಪಿ ರಾಜ್ಯ ಘಟಕದ ಖಜಾಂಚಿಯಾಗಿ ಸೇವೆ.

### 2008
ಗಾಂಧಿನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ.

### 2009
15ನೇ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಸಂಸದೀಯ ಕ್ಷೇತ್ರದಿಂದ 340,162 ಮತಗಳು ಪಡೆದು ಗೆಲುವು ಸಾಧನೆ

### 2014
ಅದೇ ಕ್ಷೇತ್ರದಿಂದ 5,57,130 ಮತಗಳು ಪಡೆದು ಲೋಕಸಭೆಗೆ ಮರು ಆಯ್ಕೆ; 1,37,500 ಮತಗಳ ಗಣನೀಯ ಅಂತರದಿಂದ ಗೆಲುವು ಸಾಧನೆ

### 2019
ಸತತ ಮೂರನೇ ಬಾರಿ 6 ಲಕ್ಷ ಮತಗಳನ್ನು ಪಡೆಯುವ ಮೂಲಕ ಲೋಕಸಭೆಗೆ ಆಯ್ಕೆ.



## ಸಂಸತ್ತಿನಲ್ಲಿ ಹಾಜರಾತಿ

**86%** 15ನೇ ಲೋಕಸಭೆ (2009-2014)

**83%** 16ನೇ ಲೋಕಸಭೆ (2014-2019)

**82%** 17ನೇ ಲೋಕಸಭೆ (2019-2024)

## ಸಂಸತ್ತಿನಲ್ಲಿ ಪ್ರಶ್ನೆಗಳು

**252** 15ನೇ ಲೋಕಸಭೆ (2009-2014)

**315** 16ನೇ ಲೋಕಸಭೆ (2014-2019)

**189** 17ನೇ ಲೋಕಸಭೆ (2019-2024)

## ಸಂಸದೀಯ ಸಮಿತಿಗಳ ಸದಸ್ಯತ್ವ

**2014-2019**
ವಸತಿ ಮತ್ತು ನಗರ ವ್ಯವಹಾರಗಳು

**2014-2017**
ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ

**2019-2024**
ವಿದೇಶಾಂಗ ವ್ಯವಹಾರಗಳು

**2019-2024**
ವಸತಿ ಮತ್ತು ನಗರ ವ್ಯವಹಾರಗಳು

**2022-2024**
ಇತರೆ ಹಿಂದುಳಿದ ವರ್ಗಗಳ ಕಲ್ಯಾಣ



# MPLADS ಅನುದಾನ

ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನವನ್ನು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ದಕ್ಷತೆಯಿಂದ ಬಳಸಲಾಗಿದೆ.

**ಆಸ್ಪತ್ರೆ**
**100.5 Lakhs**

**ವಿವಿಧ ಸಂಸ್ಥೆಗಳ ಮೂಲಸೌಕರ್ಯ ಅಭಿವೃದ್ಧಿ**
**180.9 Lakhs**

**ಪಾರ್ಕ್‌ಗಳ ಅಭಿವೃದ್ಧಿ**
**122.5 Lakhs**



**ಭದ್ರತೆ**
(ಸಿಸಿಟಿವಿ ಮತ್ತು ಫೆನ್ಸಿಂಗ್)
**96.24 Lakhs**

**ನೈರ್ಮಲ್ಯ**
(ಶೌಚಾಲಯಗಳ ನಿರ್ಮಾಣ)
**170 Lakhs**

**ಪೊಲೀಸ್ ಕಲ್ಯಾಣ**
**38 Lakhs**

**ವೆಟರ್ನರಿ ಆಸ್ಪತ್ರೆ**
**49.4 Lakhs**

**ಆರ್ ಓ ಪ್ಲಾಂಟ್**
**633 Lakhs**

**ವಿಕಲಚೇತನರ ಸಬಲೀಕರಣ**
(ಲ್ಯಾಪ್‌ಟಾಪ್‌ಗಳು, ವಿಶೇಷವಾಗಿ ವಿನ್ಯಾಸಗೊಳಿಸಿದ ದ್ವಿಚಕ್ರ ವಾಹನಗಳು, ಶ್ರವಣ ಸಾಧನಗಳ ವಿತರಣೆ)
**21.4 Lakhs**

**ಸಮುದಾಯ ಭವನ**
**50 Lakhs**

**ಶಿಕ್ಷಣ**
**197.75 Lakhs**



**Total: 1812.14**

**ಕ್ರೀಡೆ ಮತ್ತು ಜಿಮ್** **152.45 Lakhs**

**8 Cr** ಕೋವಿಡ್-19 ಸಾಂಕ್ರಾಮಿಕದಿಂದ ಎದುರಾದ ಸವಾಲುಗಳನ್ನು ಎದುರಿಸಲು ಭಾರತ ಸರ್ಕಾರವು MPLADS ಅನುದಾನದಿಂದ 8 ಕೋಟಿಗಳನ್ನು ಮಂಜೂರು ಮಾಡಿದೆ
























## ಸಾರ್ವಜನಿಕ ಸಾರಿಗೆ

**2014 ರಿಂದ ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ 1,30,000 ಕೋಟಿ ರೂ. ಮಂಜೂರಾಗಿದೆ.**

ಮಂಜೂರಾಗಿರುವ ಮೂಲ ಸೌಕರ್ಯ ಯೋಜನೆಗಳ ಮೌಲ್ಯ

**Rs. 1,30,000 Cr**



# 1 / ಬೆಂಗಳೂರನ್ನು ಬದಲಿಸಲಿರುವ ಉಪನಗರ ರೈಲು ಯೋಜನೆಯ (BSRP) ಪ್ರಾರಂಭ

ಸಂಸತ್ತಿನಲ್ಲಿ ಚರ್ಚೆ ಹಾಗೂ ಕೇಂದ್ರ ಸರ್ಕಾರದ ಮಟ್ಟದಲ್ಲಿ ನಿರಂತರ ಪ್ರಯತ್ನಗಳ ಮೂಲಕ ಬೆಂಗಳೂರು ಉಪನಗರ ರೈಲು ಯೋಜನೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆನು.

ಉಪನಗರ ರೈಲು ಯೋಜನೆಗೆ ಮೋದಿ ಸರ್ಕಾರ 2020 ರ ಅಕ್ಟೋಬರ್‌ನಲ್ಲಿ ಮಂಜೂರಾತಿ ನೀಡುವ ಮೂಲಕ ದಶಕಗಳ ಕನಸು ಸಾಕಾರಗೊಳಿಸಿದೆ.

ಅಂದಾಜು 15,767 ಕೋಟಿ ರೂ. ವೆಚ್ಚದ ಬೆಂಗಳೂರು ಉಪನಗರ ರೈಲು ಯೋಜನೆಯು ನಗರದ ಸಂಚಾರ ದಟ್ಟಣೆ ನಿವಾರಣೆಯ ದೃಷ್ಟಿಯಿಂದ ನಿರ್ಣಾಯಕವಾಗಿದ್ದು.

ಪ್ರತಿ ದಿನ 10 ಲಕ್ಷ ಜನರಿಗೆ ಸೇವೆ ನೀಡುವ ಮೂಲಕ ಈ ಯೋಜನೆಯು ಉಪನಗರ ಹಾಗೂ ಟೌನ್‌ಶಿಪ್‌ಗಳಿಗೆ ನೆರವಾಗಲಿದೆ.

**2019 -** ಆರ್ಥಿಕ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಈ ಯೋಜನೆಗೆ 15,767 ಕೋಟಿ ರೂ. ಘೋಷಿಸಿದರು.

**2020-** ಮೋದಿ ನೇತೃತ್ವದ ಸಚಿವ ಸಂಪುಟದಲ್ಲಿ ಯೋಜನೆಗೆ ಅನುಮೋದನೆ ದೊರೆಯಿತು.

**2022-** 148 ಕಿ.ಮೀ. ಉದ್ದದ 4 ಕಾರಿಡಾರ್ ಒಳಗೊಂಡ ಯೋಜನೆಯ ಕಾಮಗಾರಿಗೆ ಪ್ರಧಾನಿ ಮೋದಿ ಶಂಕುಸ್ಥಾಪನೆ ನೆರವೇರಿಸಿದರು. ಬೆಂಗಳೂರು 40 ವರ್ಷಗಳ ಕನಸು ಕೇವಲ 40 ತಿಂಗಳಲ್ಲಿ ನನಸಾಗಲಿದೆ.

**10**
ಲಕ್ಷಕ್ಕೂ ಅಧಿಕ ಪ್ರಯಾಣಿಕರಿಗೆ ಅನುಕೂಲಕರವಾಗಲಿದೆ

ಬೆಂಗಳೂರು ಉಪನಗರ ರೈಲು ಯೋಜನೆಯ ವೆಚ್ಚ **Rs. 15,767 cr**


































# 2 ನಮ್ಮ ಮೆಟ್ರೋ ಪುನಶ್ಚೇತನ

## 2019 ರಿಂದ 2024 ರವರೆಗೆ ಮಂಜೂರಾದ ಮೆಟ್ರೊ - 73.92 ಕಿ.ಮೀ.

### ನಮ್ಮ ಮೆಟ್ರೊ ವಿಸ್ತರಣೆ (2A & 2B)

2014 ರಲ್ಲಿ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದರೂ, ಮೆಟ್ರೋ ಹಂತ-2A (ಸೆಂಟ್ರಲ್ ಸಿಲ್ಕ್ ಬೋರ್ಡ್-ಕೆ.ಆರ್.ಪುರ) ಮತ್ತು ಹಂತ-2 ಬಿ (ಕೆ.ಆರ್.ಪುರ-ವಿಮಾನ ನಿಲ್ದಾಣ) ಯೋಜನೆಯ ಪ್ರಗತಿ ಕುಂಠಿತಗೊಂಡು, ಬಹುತೇಕ ಸ್ಥಗಿತಗೊಂಡಿತ್ತು, ನಂತರ ನಾನೇ ಮಧ್ಯಸ್ಥಿಕೆ ವಹಿಸಿ ಕಾಮಗಾರಿ ಚುರುಕುಗೊಳ್ಳಲು ಕ್ರಮ ವಹಿಸಿದೆ.

₹ 14,788 ಕೋಟಿ ವೆಚ್ಚದ 58 ಕಿ.ಮೀ. ಉದ್ದದ ಮೆಟ್ರೋ ಹಂತ 2A ಮತ್ತು 2B ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.

### ನೇರಳೆ ಮಾರ್ಗದ ಕಾರ್ಯಾರಂಭ

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಆದೇಶದಂತೆ, ವಿಐಪಿ ಅಥವ ಔಪಚಾರಿಕ ಉದ್ಘಾಟನಾ ಸಮಾರಂಭಕ್ಕೆ ಕಾಯದೆ ನೇರಳೆ ಮಾರ್ಗದಲ್ಲಿ ರೈಲು ಕಾರ್ಯಾಚರಣೆಗೆ (ಚಲ್ಲಘಟ್ಟ-ಕೆಂಗೇರಿ ಮತ್ತು ಬೈಯಪ್ಪನಹಳ್ಳಿ-ವೈಟ್ ಫೀಲ್ಡ್) ಕ್ರಮ ವಹಿಸಿ, ಸಂಪೂರ್ಣ ಸಾರ್ವಜನಿಕ ಸೇವೆಗೆ ಒದಗಿಸಲಾಯಿತು.

ನ ಬಜೆಟ್
**Rs.14,788**
58km ಮೆಟ್ರೋ ಹಂತ 2A ಮತ್ತು 2B ಗಾಗಿ



namma metro




















# 3 ಬೆಂಗಳೂರಿನ ಸಾರಿಗೆ ಅಗತ್ಯಕ್ಕಾಗಿ ಎಲೆಕ್ಟ್ರಿಕ್ ಬಸ್ ಬಳಕೆ

ಪ್ರಯಾಣಿಕರ ಅಗತ್ಯಕ್ಕನುಗುಣವಾಗಿ ಸುಮಾರು 6,500 ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸುವ ಪ್ರಕ್ರಿಯೆ ಒಂದು ದಶಕದಿಂದ ಸ್ಥಗಿತಗೊಂಡಿತ್ತು. ಪ್ರಧಾನಿ ಮೋದಿಯವರ ಫೇಮ್ -1 ಮತ್ತು ಫೇಮ್-2 ಯೋಜನೆಯಡಿ 1,500 ಎಲೆಕ್ಟ್ರಿಕ್ ಬಸ್‌ಗಳು ಬೆಂಗಳೂರಿಗೆ ಮಂಜೂರಾಗಿದೆ.

ಇದು ಖಾಸಗಿ ವಾಹನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಸುರಕ್ಷಿತ ಹಾಗೂ ಪರಿಸರ ಸ್ನೇಹಿ ಸಾರಿಗೆ ನೀಡುತ್ತದೆ.

**6,500 buses**
ನಿಶ್ಚಲ

**1,500 e-buses**
ಮಂಜೂರಾಗಿದೆ












# 4 ನೈಋತ್ಯ ರೈಲ್ವೆಯ ಪ್ರಗತಿ ವರದಿ

## ಹೊಸ ರೈಲುಗಳು, ನಿಲುಗಡೆ ಮತ್ತು ಮೂಲಸೌಕರ್ಯ

ಕಳೆದ ಕೆಲವು ವರ್ಷಗಳಲ್ಲಿ ನೈಋತ್ಯ ರೈಲ್ವೆಯಿಂದ ಸೇವೆಯ ಗುಣಮಟ್ಟ ಹೆಚ್ಚಿಸುವಲ್ಲಿ ಗಮನಾರ್ಹ ಪ್ರಗತಿ ಕಂಡುಬರಲು ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:

**33** ಹೊಸ ರೈಲುಗಳ ಪರಿಚಯ

**20** ಹೊಸ ರೈಲು ನಿಲುಗಡೆಗಳ ಆರಂಭ

**21** ರೈಲುಗಳ ಸೇವೆ ವಿಸ್ತರಣೆ

**Rs. 212.64 Cr**
ಕೋಟಿ ರೂ ವೆಚ್ಚದಲ್ಲಿ ಆರು ಪ್ರಮುಖ ಮೂಲಸೌಕರ್ಯ ಯೋಜನೆಗಳು ಪೂರ್ಣ

ಒಟ್ಟು
**Rs. 365.207 Cr**
ವೆಚ್ಚದಲ್ಲಿ 10 ರೈಲು ನಿಲ್ದಾಣಗಳಲ್ಲಿ
**64** ಸೌಲಭ್ಯಗಳನ್ನು ಕಲ್ಪಿಸಲಾಗಿದೆ.
ಅವುಗಳು:



**See breakdown per station below**

| Station Name | Number of Works | Cost (in crore) |
|---|---|---|
| KSR Bengaluru Station | 19 | 22.0511 Cr |
| Bengaluru Cantonment Station | 5 | 2.74 Cr |
| Carmelaram Station | 3 | 0.8277 Cr |
| KSR Bengaluru & Bengaluru Cantonment | 2 | 0.44 Cr |
| Whitefield Station | 11 | 21.9532 Cr |
| Banaswadi Station | 7 | 0.769 Cr |
| Baiyappanahalli Station | 8 | 0.948 Cr |
| Bengaluru East Station | 4 | 0.228 Cr |
| Hoodi Station | 3 | 1.25 Cr |
| Sir M Visvesvaraya Terminal (SMVT) | 3 | 1.25 Cr |



- ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ, ಬೆಂಗಳೂರಿನ ಕೆ.ಆರ್.ಪುರ ಮತ್ತು ವೈಟ್‌ಫೀಲ್ಡ್ ನಿಲ್ದಾಣ ಮರು ಅಭಿವೃದ್ಧಿಯಾಗುತ್ತಿದೆ.
- ಕಂಟೋನ್‌ಮೆಂಟ್ ರೈಲು ನಿಲ್ದಾಣವನ್ನು 480 ಕೋಟಿ ರೂ. ವೆಚ್ಚದಲ್ಲಿ ವಿಶ್ವದರ್ಜೆಯ ನಿಲ್ದಾಣವಾಗಿ ಅಭಿವೃದ್ಧಿಗೊಳಿಸಲಾಗುವುದು. ನೆಲಮಾಳಿಗೆಯಲ್ಲಿ 1,000 ಕಾರು ಹಾಗೂ ದ್ವಿಚಕ್ರ ವಾಹನ ಪಾರ್ಕಿಂಗ್ ಸೌಲಭ್ಯ ನೀಡಲಾಗುತ್ತದೆ.
- ವಂದೇ ಭಾರತ್ ರೈಲಿನ ಮೂಲಕ ಬೆಂಗಳೂರನ್ನು ಪ್ರಮುಖ ನಗರಗಳಾದ ಧಾರವಾಡ, ಬೆಳಗಾವಿ, ಹುಬ್ಬಳ್ಳಿ, ಚೆನ್ನೈ (2 ರೈಲುಗಳು), ಮೈಸೂರು ಹೈದರಾಬಾದ್, ಕೊಯಮತ್ತೂರು ಮತ್ತು ಕಲಬುರ್ಗಿಗೆ ಸಂಪರ್ಕಿಸಲಾಗಿದೆ. ಅಮೃತ ಭಾರತದಡಿ ಪಶ್ಚಿಮ ಬಂಗಾಳದ ಮಾಲ್ಡ ಪಟ್ಟಣಕ್ಕೆ ಸಂಪರ್ಕಿಸಲಾಗಿದೆ.
- 874.12 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ರೈಲ್ವೆ ಮಾರ್ಗದಲ್ಲಿ ಆಟೊಮೆಟಿಕ್ ಸಿಗ್ನಲಿಂಗ್ ವ್ಯವಸ್ಥೆ ತರಲಾಗುತ್ತಿದೆ

**Rs. 314 Cr**
ನಿರ್ಮಾಣ ವೆಚ್ಚ
ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್

**Rs. 480 Cr**
ಕಂಟೋನ್ಮೆಂಟ್ ನಿಲ್ದಾಣದ ಪುನರಾಭಿವೃದ್ಧಿ

**Rs. 874.12 Cr**
ಬೆಂಗಳೂರಿನಾದ್ಯಂತ ರೈಲು ಮಾರ್ಗಗಳಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆ

## ಬೈಯಪ್ಪನಹಳ್ಳಿ ನಿಲ್ದಾಣದ ಟರ್ಮಿನಲ್ ವಿಸ್ತರಣೆಗೆ ಯಶಸ್ವಿಯಾಗಿ ಅನುಮೋದನೆ.

ವಿಶೇಷವಾಗಿ ಬೆಂಗಳೂರಿನ ಪೂರ್ವ ಭಾಗದ ಬೆಳವಣಿಗೆಯನ್ನು ಪರಿಗಣಿಸಿ, ಕೆಎಸ್‌ಆರ್ ನಿಲ್ದಾಣದಲ್ಲಿರುವ ಸೌಲಭ್ಯಗಳು ಮತ್ತು ದಟ್ಟಣೆಯನ್ನು ನಿಭಾಯಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ, ಭಾರತದ ಮೊದಲ ಕೇಂದ್ರೀಯ ಹವಾನಿಯಂತ್ರಿತ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾದ ಅತ್ಯಾಧುನಿಕ ಸರ್ ಎಂ ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ನಿರ್ಮಾಣವನ್ನು ರೂ.314 ವೆಚ್ಚದಲ್ಲಿ ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆನು.







P C Mohan (Modi Ka Parivar) · 06/11/23
Bangalore Cantonment Railway Station, a pivotal city hub, is swiftly undergoing a monumental Rs 480-crore redevelopment. Hon'ble PM Shri @narendramodi Ji laid its foundation on June 20, 2022. This heralds a new era in rail travel, promising extraordinary experiences for all.

MP bats for travelator to link Cantonment rly, Metro stns















# 5 ಬೆಂಗಳೂರಿನಲ್ಲಿ ವೃತ್ತಾಕಾರದ ರೈಲು ಮಾರ್ಗದ ಅಗತ್ಯದ ವಿಶ್ಲೇಷಣೆ

ಭವಿಷ್ಯದ ದೃಷ್ಟಿಯಿಂದ ಬೆಂಗಳೂರಿನಲ್ಲಿ 287 ಕಿ.ಮೀ. ಉದ್ದದ ವೃತ್ತಾಕಾರದ ರೈಲು ಯೋಜನೆ ತರಲು ಕಾರ್ಯಸಾಧ್ಯತಾ ಅಧ್ಯಯನ ನಡೆಸಲಾಗುತ್ತಿದೆ.

ಈ ಮಹತ್ವಕಾಂಕ್ಷಿ ಯೋಜನೆಯು ನಗರದೊಳಗೆ ಹಾಗೂ ಹೊರವಲಯದಲ್ಲಿ ಸುಲಲಿತ ಸಾರಿಗೆ ಸೇವೆ ನೀಡಲಿದೆ.






ಸಾರ್ವಜನಿಕ ಸಾರಿಗೆ

# 6 ಸ್ಯಾಟಲೈಟ್ ಟೌನ್ ರಿಂಗ್ ರೋಡ್ (STRR)

ಬೆಂಗಳೂರು ಸುತ್ತಲಿನ ಸ್ಯಾಟಲೈಟ್ ಟೌನ್ ರಿಂಗ್ ರೋಡ್ (STRR) ಯೋಜನೆಗೆ 15,000 ಕೋಟಿ ರೂ. ವೆಚ್ಚವಾಗಲಿದೆ. ಇದು ಕರ್ನಾಟಕದ 12 ಪಟ್ಟಣಗಳನ್ನು ಸಂಪರ್ಕಿಸಲಿದ್ದು, ನಾಲ್ಕರಿಂದ ಆರು ಪಥಗಳನ್ನು ಹೊಂದಲಿದೆ.

ಬೆಂಗಳೂರು-ಕೋಲಾರ ಹೆದ್ದಾರಿಯಲ್ಲಿ ತುಮಕೂರು ಹೆದ್ದಾರಿಯನ್ನು ಸಂಪರ್ಕಿಸುವ ಹೊಸ STRR ರಸ್ತೆಯನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು. ಈ ರಸ್ತೆಯಿಂದಾಗಿ ಸುಮಾರು 20,000 ಟ್ರಕ್ ಮತ್ತು ಇತರೆ ವಾಣಿಜ್ಯ ಸಾರಿಗೆ ವಾಹನಗಳು ಬೆಂಗಳೂರಿಗೆ ಬರುವುದನ್ನು ತಪ್ಪಿಸಲಾಗಿದೆ. ಇದರಿಂದ 30% ಸಂಚಾರ ದಟ್ಟಣೆ ನಿವಾರಣೆಯಾಗಿದೆ.

**ಸ್ಯಾಟಲೈಟ್ ಟೌನ್ ರಿಂಗ್ ರೋಡ್**

**Rs. 15,000 Cr**





# 7 ಬೆಂಗಳೂರಿನ ರಸ್ತೆ ಅಭಿವೃದ್ಧಿ

## 1. ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ



10 ಪಥಗಳ, 118 ಕಿ.ಮೀ. ಉದ್ದದ, ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ₹ 8,408 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿದ್ದು, ಪ್ರಯಾಣದ ಅವಧಿ 90 ನಿಮಿಷಕ್ಕಿಂತ ಕಡಿಮೆಯಾಗಿದೆ.

| 10 ಲೇನ್ ಹೆದ್ದಾರಿ | 118 Km |
|---|---|
| ಒಟ್ಟು ವೆಚ್ಚ | Rs. 8,408 Cr |

## 2. ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ



18,000 ಕೋಟಿ ರೂ. ವೆಚ್ಚದ, 258 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್‌ವೇ ಗಂಟೆಗೆ 120 ಕಿ.ಮೀ. ವೇಗದ ಪ್ರಯಾಣದ ಸೌಲಭ್ಯ ನೀಡಲಿದೆ.

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎ) ಪ್ರಸ್ತುತ ಬೆಂಗಳೂರಿನ ಅತಿ ಉದ್ದದ ಮೇಲ್ಸೇತುವೆ ನಿರ್ಮಾಣಕ್ಕಾಗಿ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿದೆ. ಕೆಆರ್ ಪುರಂ ಪೊಲೀಸ್ ಠಾಣೆಯಿಂದ ಕೊಳತ್ತೂರು ಜಂಕ್ಷನ್‌ವರೆಗೆ ಹಳೆಯ ಮದ್ರಾಸ್ ರಸ್ತೆಯಲ್ಲಿ 15 ಕಿಲೋಮೀಟರ್ ವ್ಯಾಪಿಸಿರುವ ಈ ಮಹತ್ವಕಾಂಕ್ಷೆಯ ಮೇಲ್ಸೇತುವೆ ಸಂಚಾರ ದಟ್ಟಣೆಯ ಸಮಸ್ಯೆಗಳನ್ನು ಗಣನೀಯವಾಗಿ ನಿವಾರಿಸುತ್ತದೆ.

| ಪ್ರಯಾಣದಲ್ಲಿನ ವೇಗದ ಹೆಚ್ಚಳ | 120 Km<br>258 Km |
|---|---|
| ನಿರ್ಮಾಣದ ವೆಚ್ಚ | Rs. 18,000 Cr |

## 3.ಬೆಂಗಳೂರು-ಪುಣೆ ಎಕ್ಸ್‌ಪ್ರೆಸ್‌ವೇ



ಪ್ರಸ್ತಾವಿತ 700 ಕಿ.ಮೀ ಗ್ರೀನ್ ಫೀಲ್ಡ್ ಎಕ್ಸ್‌ಪ್ರೆಸ್‌ವೇ ಪುಣೆ ಮತ್ತು ಬೆಂಗಳೂರು ನಡುವಿನ ಪ್ರಯಾಣದ ಅವಧಿಯನ್ನು ಕೇವಲ ಏಳು ಗಂಟೆಗೆ ಇಳಿಸಲಿದೆ.

| ಪುಣೆ ಮತ್ತು ಬೆಂಗಳೂರು ನಡುವಿನ ಪಯಣದ ಸಮಯವನ್ನು ಗಣನೀಯವಾಗಿ ಕಡಿತಗೊಳಿಸಲಿದೆ |
|---|
| 12 Hours to 7 Hours |

| ಪ್ರಸ್ತಾವಿತ ಗ್ರೀನ್ ಫೀಲ್ಡ್ ಎಕ್ಸ್‌ಪ್ರೆಸ್‌ವೇ ವ್ಯಾಪ್ತಿ. |
|---|
| 700 Km |

2014 ರಲ್ಲಿ ಮೋದಿ ಸರ್ಕಾರ ರಚನೆಯಾದಾಗ, ಕರ್ನಾಟಕವು ಕೇವಲ 6,707 ಕಿಮೀ ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿತ್ತು ಆದರೆ ಈಗ 8,200 ಕಿಮೀಗೆ ಏರಿದೆ

| ಮೋದಿ ಸರ್ಕಾರದಡಿ ಕರ್ನಾಟಕ ರಾಷ್ಟ್ರೀಯ ಹೆದ್ದಾರಿಗಳ ಹೆಚ್ಚಳ |
|---|
| 8,200 Km |

## 4.ಕಾಟಮನಲ್ಲೂರು, NH-75 ನಲ್ಲಿ ಮೇಲ್ಸೇತುವೆ ನಿರ್ಮಾಣ



71+885 (KA-02-290), NH-75 ರ ಬೆಂಗಳೂರು-ಹೊಸಕೋಟೆ-ಮುಳಬಾಗಲು ವಿಭಾಗದಲ್ಲಿ ಬ್ಲಾಕ್‌ಸ್ಪಾಟ್‌ಗಳನ್ನು ಸರಿಪಡಿಸಲು ಮತ್ತು ರಸ್ತೆ ಸುರಕ್ಷತೆಯ ಪ್ರಯತ್ನಗಳ ಭಾಗವಾಗಿ ಕಾಟಮನಲ್ಲೂರಿನ ಸಿಎಚ್‌ನಲ್ಲಿಮೇಲ್ಸೇತುವೆ ನಿರ್ಮಿಸಲಾಗುತ್ತಿದೆ. ಈ ಕಾಮಗಾರಿ ಪೂರ್ಣಗೊಂಡ ನಂತರ, ಬೆಂಗಳೂರು-ತಿರುಪತಿ ಮಾರ್ಗದಲ್ಲಿ ಟ್ರಾಫಿಕ್ ಹರಿವನ್ನು ಸುಧಾರಿಸುವುದಲ್ಲದೆ, ವೈಟ್‌ಫೀಲ್ಡ್-ಬೂದಿಗೆರೆಯ ಪ್ರದೇಶಗಳಲ್ಲಿ ಸ್ಥಳೀಯ ಸಂಚಾರ ದಟ್ಟಣೆಯನ್ನು ಗಣನೀಯವಾಗಿ ಕಡಿಮೆ ಮಾಡಲಿದೆ. ತಪ್ಪು ದಿಕ್ಕಿನ ಟ್ರಾಫಿಕ್‌ನಿಂದ ಉಂಟಾಗಬಹುದಾದ ಅಪಘಾತಗಳನ್ನು ಕಡಿಮೆ ಮಾಡಲಿದೆ.



# 8 / ವಿಶ್ವದರ್ಜೆಯ ವಿಮಾನ ನಿಲ್ದಾಣ ಟರ್ಮಿನಲ್

ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟರ್ಮಿನಲ್-2 ನಿರ್ಮಾಣಕ್ಕೆ 13,000 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದರಿಂದ ವಿಮಾನ ಸಾರಿಗೆ ಹಾಗೂ ಮೂಲಸೌಕರ್ಯವನ್ನು ಸುಧಾರಿಸಿದೆ.

ಜಗತ್ತಿನ ಅತ್ಯಂತ ಆಕರ್ಷಕ ವಿಮಾನ ನಿಲ್ದಾಣವೆಂದು T2 ಹೆಸರು ಪಡೆದಿದ್ದು, ಯುನೆಸ್ಕೋದ 2023 ನೇ ಸಾಲಿನ Prix Versailles ನಲ್ಲಿ ವಿಶೇಷ ಪ್ರಶಸ್ತಿ ಪಡೆದಿದೆ.

| ಟರ್ಮಿನಲ್ 2 ನಿರ್ಮಾಣದ ವೆಚ್ಚ | Rs. 13,000 Cr |
|---|---|

























# Carmelaram Rly cross road widening work begins

■ Level crossing a major traffic bottleneck ■ Local residents had organised protests

**FLYOVER PROJECT YET TO TAKE OFF**

As a permanent solution there is a plan to build a flyover, estimated to cost around Rs 42 crore.
A senior state government official told Deccan Chronicle, "The flyover blueprint has already been prepared and the state government is waiting for the central railway department to release a portion of the estimated amount. State government officials have already met the Union railway minister in this regard."
Sandeep hoped the work on flyover will also begin soon. "Only then this stretch will be cleared of traffic snarls," he added.



# ಬೆಂಗಳೂರಿನ ಪ್ರಗತಿಗೆ ಚಿಂತನೆ ಹಾಗೂ ಕ್ರಮ



## 1. ಕಾರ್ಮೆಲ್‌ರಾಮ್ ಲೆವೆಲ್-ಕ್ರಾಸಿಂಗ್ ಸುಧಾರಣೆ




ಕಾರ್ಮೆಲ್‌ರಾಮ್ ಲೆವೆಲ್-ಕ್ರಾಸಿಂಗ್‌ನಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯನ್ನು ನಿವಾರಿಸಲು ನಾನು MPLAD ನಿಂದ ಅನುದಾನ ನೀಡಿದೆ. ಈ ಅನುದಾನ ಬಳಸಿ 7.5 ಮೀಟರ್ ಅಗಲದ ಕ್ರಾಸಿಂಗ್ ರಸ್ತೆಯನ್ನು 15 ಮೀಟರ್‌ಗೆ ಹೆಚ್ಚಿಸಿ ಸುಗಮ ಸಂಚಾರದ ಸೌಲಭ್ಯ ಕಲ್ಪಿಸಲಾಯಿತು.

## 2. ಬೆಂಗಳೂರಿನ ಪ್ರಗತಿಗಾಗಿ ರಕ್ಷಣಾ ಭೂಮಿ ಲಭ್ಯತೆ




ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗಾಗಿ ರಕ್ಷಣಾ ಸಚಿವಾಲಯದ ಜಮೀನು ಒದಗಿಸಲು ಕ್ರಮ ವಹಿಸಲಾಗಿದೆ. ರಕ್ಷಣಾ ಸಚಿವರ ತಾತ್ವಿಕ ಅನುಮೋದನೆಯೊಂದಿಗೆ, 282.09 ಕೋಟಿ ರೂ. ಮೌಲ್ಯದ 55,819 ಚದರ ಮೀಟರ್ ಜಮೀನನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

## 3. KIA ಗೆ ಸುಲಭ ಪ್ರವೇಶ



ಮೈಲನಹಳ್ಳಿ-ಬಾಗಲೂರು-ಹೆಣ್ಣೂರು ಮಾರ್ಗದ ಮೂಲಕ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದೊಳಗೆ ಹೋಗಲು ಸುಲಭ ಸಾರಿಗೆ ವ್ಯವಸ್ಥೆಯನ್ನು ಪ್ರಸ್ತಾಪಿಸಿದ್ದು ಯಶಸ್ವಿಯಾಯಿತು. ನಿರಂತರ ಪ್ರಯತ್ನಗಳ ಫಲವಾಗಿ ವಿಮಾನ ನಿಲ್ದಾಣಕ್ಕೆ ಎರಡನೇ ಪ್ರವೇಶ ವ್ಯವಸ್ಥೆಯ ಯೋಜನೆ ಅನುಮೋದನೆಯಾಗಿದ್ದು, ದಕ್ಷಿಣ, ಪೂರ್ವ ಮತ್ತು ಆಗ್ನೇಯ ಪ್ರದೇಶಗಳ ಜನರಿಗೆ ಅನುಕೂಲವಾಗಿದೆ.

## 4. ಹೆಣ್ಣೂರು ಮೇಲ್ಸೇತುವೆ ಪುನಶ್ಚೇತನ



ಸ್ಥಗಿತಗೊಂಡಿದ್ದ ಹೆಣ್ಣೂರು ಮೇಲ್ಸೇತುವೆ ಕಾಮಗಾರಿಯನ್ನು ಮರು ಆರಂಭಿಸುವಂತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಬೇಡಿಕೆಗೆ ಕೂಡಲೇ ಸ್ಪಂದಿಸಲಾಯಿತು. ಬೆಂಗಳೂರು ನಗರಾಭಿವೃದ್ಧಿ ಸಚಿವರೊಂದಿಗೆ ಚರ್ಚಿಸಿ ಕಾಮಗಾರಿ ವೇಗವಾಗಿ ಪೂರ್ಣಗೊಳ್ಳಲು ಕ್ರಮ ವಹಿಸಲಾಯಿತು.

## 5. ಬೆಂಗಳೂರಿನಲ್ಲಿ NIA ಮತ್ತು ಯುಎಸ್ ಕಾನ್ಸುಲೇಟ್




ಮೋದಿ ಸರ್ಕಾರವು ಬೆಂಗಳೂರಿನಲ್ಲಿ ರಾಷ್ಟ್ರೀಯ ತನಿಖಾ ದಳದ ಕಚೇರಿ ಸ್ಥಾಪಿಸಿದ್ದು, ಸುರಕ್ಷತೆಯ ದೃಷ್ಟಿಯಿಂದ ಇದು ದೊಡ್ಡ ಮೈಲುಗಲ್ಲು. ನಗರದಲ್ಲಿ ಯುಎಸ್ ಕಾನ್ಸುಲೇಟ್ ಕಚೇರಿ ಆರಂಭಿಸಲು ಸಿದ್ಧತೆ ನಡೆದಿದೆ.



# ಬೆಂಗಳೂರು ಸ್ಮಾರ್ಟ್ ಸಿಟಿ

## ನಗರ ಮೂಲಸೌಕರ್ಯ ಸುಧಾರಣೆ

ಜನಸಂಖ್ಯೆ:
ಸುಮಾರು 1.2 ಕೋಟಿ

ಸವಾಲುಗಳು:
ವೇಗದ ನಗರೀಕರಣ

ಕ್ರಮ : ನಗರದ ಹಳೆ ಪ್ರದೇಶಗಳ ಅಭಿವೃದ್ಧಿ,
ಸ್ಮಾರ್ಟ್ ಆಡಳಿತ ಜಾರಿ

ಸ್ಮಾರ್ಟ್ ಸಿಟಿ ಮಿಷನ್:
ಮೋದಿ ಸರ್ಕಾರದಿಂದ ಪ್ರಾರಂಭ

ಉದ್ದೇಶ:
100 ಸ್ಮಾರ್ಟ್ ಸಿಟಿಗಳ ಅಭಿವೃದ್ಧಿ

ಗುರಿಗಳು: ಸುಧಾರಿತ ಮೂಲಸೌಕರ್ಯ,
ಗುಣಮಟ್ಟದ ಜೀವನ

ಪಾತ್ರ: ಸ್ಮಾರ್ಟ್ ಸಿಟಿಗಳ ಎರಡನೇ ಪಟ್ಟಿಯಲ್ಲಿ
ಬೆಂಗಳೂರು ಸೇರ್ಪಡೆಗೆ ಯಶಸ್ವಿ ಯತ್ನ

ಅನುದಾನ: ₹1000 ಕೋಟಿ



# ನಗರ ಮೂಲಸೌಕರ್ಯ ಸುಧಾರಣೆ

## 1. ಸ್ಮಾರ್ಟ್ ಟೆಂಡರ್‌ಶ್ಯೂರ್ ರಸ್ತೆಗಳು



ಸುರಕ್ಷತೆ ಹಾಗೂ ಅನುಕೂಲ ಪರಿಗಣಿಸಿ ವಿನ್ಯಾಸ

ವಿಸ್ತಾರವಾದ ಪಾದಚಾರಿ ಮಾರ್ಗ, ಸೈಕಲ್ ಪಥ, ಏಕರೂಪದ ಅಳತೆ, ಪಾರ್ಕಿಂಗ್ ಬೇ ಸೌಲಭ್ಯ

ಸಾರ್ವಜನಿಕ ಸಾರಿಗೆಗೆ ಅನುಕೂಲ ಹಾಗೂ ಪಾದಚಾರಿ ಮಾರ್ಗದ ಬಳಿ ನಿಲುಗಡೆ ವ್ಯವಸ್ಥೆ

ಗಿಡ, ಮರ ಬೆಳೆಸಲು ವ್ಯವಸ್ಥೆ

## 2. ಕೆ.ಆರ್.ಮಾರುಕಟ್ಟೆ ಮರು ಅಭಿವೃದ್ಧಿ ಯೋಜನೆ



ಆಧುನಿಕ ಸೌಕರ್ಯಗಳೊಂದಿಗೆ ಹಳೆಯ ಮಾರುಕಟ್ಟೆಯ ಪುನಶ್ಚೇತನ

ಸರ್ವರಿಗೂ ಸ್ನೇಹಿಯಾದ ಕಟ್ಟಡ, ಪಾರ್ಕಿಂಗ್, ಲಿಫ್ಟ್, ಶೌಚಾಲಯ, ಪ್ಲಾಜಾಗಳ ನಿರ್ಮಾಣ

## 3. ಕೆ.ಆರ್.ಮಾರುಕಟ್ಟೆಯಲ್ಲಿ ಸಾರಿಗೆ ಹಬ್ ಮತ್ತು ಜಂಕ್ಷನ್ ಅಭಿವೃದ್ಧಿ



ಸಾರ್ವಜನಿಕ ಶೌಚಾಲಯ, ಆಟದ ಸ್ಥಳ ಹಾಗೂ ತಂಗುದಾಣಗಳ ನಿರ್ಮಾಣ

ಜನರಿಗೆ ಸುಲಭ ಸೇವೆ ದೊರೆಯುವಂತೆ ಬಸ್ ನಿಲ್ದಾಣ ಹಾಗೂ ಸಬ್ ವೇಗಳ ನಿರ್ಮಾಣ

## 4. ಹಸಿರು ಕಟ್ಟಡದ ಪರಿಕಲ್ಪನೆಯಡಿ ಜವಹರಲಾಲ್ ನೆಹರು ತಾರಾಲಯ



ಹಸಿರು ಕಟ್ಟಡದ ಮಾನದಂಡಗಳನ್ನೊಳಗೊಂಡ ಅತ್ಯಾಧುನಿಕ ಸೌಲಭ್ಯದ ಕಟ್ಟಡ

ಸಭಾಂಗಣಗಳು, ದೂರದರ್ಶಕ ವೀಕ್ಷಣಾಲಯ, 60 ಕಾರುಗಳಿಗೆ ಪಾರ್ಕಿಂಗ್ ಸೌಲಭ್ಯ

## 5. ಶಿವಾಜಿನಗರ ಬಸ್ ಟರ್ಮಿನಲ್ ಅಭಿವೃದ್ಧಿ



ಪಾದಚಾರಿ ಸುರಕ್ಷತಾ ಕ್ರಮಗಳಿಗೆ ಆದ್ಯತೆ ನೀಡುವ ಟರ್ಮಿನಲ್ ಅಭಿವೃದ್ಧಿ ಮಾಡಲಾಗುತ್ತಿದೆ. ಕಾಯುವ ಕೊಠಡಿ ಹಾಗೂ ಸ್ವಚ್ಛವಾದ ಶೌಚಾಲಯ ವ್ಯವಸ್ಥೆ ರೂಪಿಸಲಾಗುತ್ತಿದೆ.

ಅಡೆತಡೆ ರಹಿತ ಸಾರಿಗೆಗಾಗಿ ಬಹು ಸಾರಿಗೆ ಸೌಲಭ್ಯ ನೀಡಲಾಗುವುದು.

## 6. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಿರು ಸಭಾಂಗಣ



600 ಆಸನಗಳ ಸಾಮರ್ಥ್ಯವುಳ್ಳ ಸಭಾಂಗಣ, ವಿಶೇಷ ಕಾರ್ಯಕ್ರಮಗಳಿಗೆ ಬಳಕೆ

ವೇದಿಕೆ ಪರದೆ, ಬೆಳಕಿನ ವ್ಯವಸ್ಥೆ ಮೊದಲಾದ ಸೌಲಭ್ಯಗಳ ಅಳವಡಿಕೆ

# ನಗರ ಮೂಲಸೌಕರ್ಯ ಸುಧಾರಣೆ

## 7. ಕಬ್ಬನ್ ಉದ್ಯಾನದ ಅಭಿವೃದ್ಧಿ: ಹಂತ A ಮತ್ತು ಹಂತ B



ಪಾದಚಾರಿ ಮಾರ್ಗದ ಅಭಿವೃದ್ಧಿ, ಜಲಮೂಲಗಳ ಪುನಶ್ಚೇತನ, ಜಾಗಿಂಗ್ ಹಾಗೂ ಸೈಕಲ್‌ಗೆ ಪ್ರತ್ಯೇಕ ಪಥ ನಿರ್ಮಾಣಕ್ಕೆ ಕ್ರಮ

ಮಳೆ ನೀರು ಕೊಯ್ಲು ಸೌಲಭ್ಯ, ಸುಂದರೀಕರಣಕ್ಕೆ ಕ್ರಮಗಳು

## 8. ರಶ್ಮಿ ಯೋಜನೆ- ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಆದ್ಯತೆ



ಅಗತ್ಯ ಸೌಲಭ್ಯಗಳೊಂದಿಗೆ ಮಹಿಳೆಯರಿಗೆ ಸುರಕ್ಷಿತ ವಾತಾವರಣ

ಸರ್ಕಾರಿ ಕಚೇರಿಗಳಲ್ಲಿ ಈ ಯೋಜನೆ ಜಾರಿ ಮಾಡಲಾಗಿದೆ

## 9. ಮಕ್ಕಳ ಸ್ನೇಹಿ ಡೇಕೇರ್ ಕೇಂದ್ರ



ಮಕ್ಕಳಿಗೆ ಸುರಕ್ಷಿತ ಹಾಗೂ ಸ್ವಚ್ಛ ಕೇಂದ್ರಗಳು

ಆಟದ ವಸ್ತುಗಳು ಹಾಗೂ ಮಕ್ಕಳ ಸ್ನೇಹಿ ಪೀಠೋಪಕರಣ ಸೌಲಭ್ಯ

## 10. ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯಕೀಯ ಉಪಕರಣ



ಆರೋಗ್ಯ ಮೂಲಸೌಕರ್ಯ ವೃದ್ಧಿಗೆ ವೈದ್ಯಕೀಯ ಉಪಕರಣಗಳ ಖರೀದಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ತಪಾಸಣೆ ಹಾಗೂ ಚಿಕಿತ್ಸೆಗೆ ಕ್ರಮ

## 11. ಸೇಫ್ ಸಿಟಿ ಕಮಾಂಡ್ ಕೇಂದ್ರ (ನಿರ್ಭಯ ನಿಧಿ) ಸ್ಥಾಪನೆ




ಮೋದಿ ಸರ್ಕಾರದ ನಿರ್ಭಯ ಅನುದಾನದಡಿ, 668 ಕೋಟಿ ರೂ.

ವೆಚ್ಚದಲ್ಲಿ, ಬೆಂಗಳೂರಿನ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೇಫ್ ಸಿಟಿ ಕಮಾಂಡ್ ಕೇಂದ್ರ ಸ್ಥಾಪಿಸಲಾಗಿದೆ.

## 12. ಬೆಂಗಳೂರು ಸ್ಮಾರ್ಟ್ ಸಿಟಿಯ ಸೈಕಲ್ ಟ್ರ್ಯಾಕ್ ಅಭಿವೃದ್ಧಿ



ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ (BSCL) ಬೆಂಗಳೂರು ಕೇಂದ್ರ ಪ್ರದೇಶದಲ್ಲಿ 35 ಕಿಲೋಮೀಟರ್ ಸೈಕಲ್ ಟ್ರ್ಯಾಕ್ ಅಭಿವೃದ್ಧಿಯನ್ನು ಪ್ರಾರಂಭಿಸಿದೆ. ಸುಸ್ಥಿರ ಚಲನಶೀಲತೆಗಾಗಿ ಸೈಕ್ಲಿಂಗ್ ಟ್ರ್ಯಾಕ್‌ಗಳು ಮತ್ತು ಸ್ಮಾರ್ಟ್ ಫುಟ್‌ಪಾತ್‌ಗಳನ್ನು ಸಂಯೋಜನೆಗೊಳಿಸಲಾಗಿದೆ. ಮೋಟಾರುರಹಿತ ಸಾರಿಗೆಯ ಮೇಲೆ ಕೇಂದ್ರೀಕರಿಸಿ, ಸಿಲ್ಕ್‌ಬೋರ್ಡ್ ಮತ್ತು ಲೌರಿ ಜಂಕ್ಷನ್ ನಡುವೆ ನಿರ್ಮಾಣವಾಗುತ್ತಿರುವ 35-ಕಿಲೋಮೀಟರ್ ಸೈಕಲ್ ಟ್ರ್ಯಾಕ್ ದಟ್ಟಣೆಯನ್ನು ನಿವಾರಿಸಲು ಮತ್ತು ಸ್ವಚ್ಛವಾದ ನಗರ ಪರಿಸರವನ್ನು ಉತ್ತೇಜಿಸಲು ರೂಪಿಸಲಾಗಿದೆ.

# ಎಚ್‌ಎಎಲ್‌ಗೆ ಹೊಸ ನೋಟ

ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ, ಎಚ್‌ಎಎಲ್ 1.35 ಕೋಟಿ ರೂ. ವಹಿವಾಟಿನ ಕಂಪನಿಯಾಗಿ ಬೆಳೆದಿದೆ. 2013 ರಿಂದ ಸಂಸ್ಥೆಯ ಷೇರು ಮೌಲ್ಯ ಐದು ಪಟ್ಟು ಅಧಿಕವಾಗಿದೆ. ಇತ್ತೀಚೆಗೆ ಮಲೇಷಿಯಾದಲ್ಲಿ ಪ್ರಾದೇಶಿಕ ಮಾರ್ಕೆಟಿಂಗ್ ಕಚೇರಿ ಆರಂಭಿಸುವ ಮೂಲಕ ಜಾಗತಿಕವಾಗಿ ಬೆಳವಣಿಗೆಯ ಹೆಜ್ಜೆ ಇರಿಸಲಾಗಿದೆ. 2022-23 ನೇ ಸಾಲಿನಲ್ಲಿ ಸಂಸ್ಥೆಯು 26,500 ಕೋಟಿ ರೂ. ದಾಖಲೆಯ ವಹಿವಾಟು ನಡೆಸಿದೆ. 2023 ರ ಮಾರ್ಚ್ ಅಂತ್ಯದ ವೇಳೆಗೆ 82,000 ಕೋಟಿ ರೂ. ಮೊತ್ತದ ಆರ್ಡರ್‌ಗಳನ್ನು ಸಂಸ್ಥೆ ಪಡೆದಿದೆ.

ಭಾರತೀಯ ವಾಯುಸೇನೆಯ ಬಲದಂತಿರುವ HAL ಸಂಸ್ಥೆಯನ್ನು ಇನ್ನಷ್ಟು ಬೆಳೆಸುವ ಮೂಲಕ ಮೋದಿ ಸರ್ಕಾರ ರಕ್ಷಣಾ ವಲಯದಲ್ಲಿ ಆತ್ಮನಿರ್ಭರತೆಯನ್ನು ತರುತ್ತಿದೆ.

| 2022-2023ರಲ್ಲಿ HAL ಗಳಿಸಿದ ಆದಾಯ | **Rs. 26,500 Cr** |
|---|---|









# ಭಾರತದ ಮೊದಲ 3D ಮುದ್ರಿತ ಅಂಚೆ ಕಚೇರಿ



# ಸಾರ್ವಜನಿಕ ಆರೋಗ್ಯ

ಅಕ್ಷಯಪಾತ್ರ, ಏಟ್ರಿಯಾ ಫೌಂಡೇಶನ್ ಮತ್ತು ಇತರ ಸಂಸ್ಥೆಗಳ ಸಹಯೋಗದಲ್ಲಿ **5.5** ಲಕ್ಷ ಊಟ ವಿತರಿಸಲಾಗಿತ್ತು.

ಉಚಿತ ಚಿಕಿತ್ಸೆ
ಆಯುಷ್ಮಾನ್ ಭಾರತ್ - ಪಿಎಂ ಜನ ಆರೋಗ್ಯ ಯೋಜನೆ

**2.7Lakhs**

ಲಸಿಕಾಕರಣ:

**33,57,440**

**332**

ಜನ ಔಷಧಿ ಕೇಂದ್ರಗಳು ಕಾರ್ಯನಿರ್ವಹಣೆ











## 1. ಕೋವಿಡ್-19 ನಿಯಂತ್ರಣ

ಸಾರ್ವಜನಿಕರು ರೋಗ ಲಕ್ಷಣ ತಿಳಿಸಲು, ರೋಗ ಪತ್ತೆ ಬಗ್ಗೆ ವಿಚಾರಿಸಲು, ವೈದ್ಯರ ಸೇವೆ ಪಡೆಯಲು ಹಾಗೂ ತುರ್ತು ನೆರವಿಗಾಗಿ ಒಂದೇ ಕಡೆ ಸೇವೆ ದೊರೆಯುವ ಡಿಜಿಟಲ್ ವ್ಯವಸ್ಥೆ ರೂಪಿಸಲಾಗಿತ್ತು.

**20,000** ಕ್ಕೂ ಹೆಚ್ಚು ಕರೆಗಳನ್ನು ಉತ್ತರಿಸಲಾಗಿತ್ತು

**650** ಆಸ್ಪತ್ರೆ ವರ್ಗಾವಣೆಗಳು

**48,000** ಕ್ಕೂ ಹೆಚ್ಚು ಆಹಾರ ಕಿಟ್‌ಗಳ ವಿತರಣೆ

ಅಕ್ಷಯಪಾತ್ರ, ಏಟ್ರಿಯಾ ಫೌಂಡೇಶನ್ ಮತ್ತು ಇತರ ಸಂಸ್ಥೆಗಳ ಸಹಯೋಗದಲ್ಲಿ **5.5** ಲಕ್ಷ ಊಟ ವಿತರಿಸಲಾಗಿತ್ತು.






## 2. ಕೋವಿಡ್ ಲಸಿಕಾಕರಣ

ಬೆಂಗಳೂರು ಕೇಂದ್ರ ಕ್ಷೇತ್ರದಲ್ಲಿ ಬೃಹತ್ ಲಸಿಕಾಕರಣ ನಡೆಸಲಾಗಿದ್ದು, ದಾಖಲೆಯಂತೆ ಅತಿ ಕಡಿಮೆ ಸಮಯದಲ್ಲಿ ಹೆಚ್ಚು ಜನರಿಗೆ ಲಸಿಕೆ ನೀಡಲಾಯಿತು.

ಲಸಿಕಾಕರಣ: **33,57,440**




## 3. ಜನ ಔಷಧಿ ಕೇಂದ್ರಗಳು

70 ರಿಂದ  90 ರಷ್ಟು ಕಡಿಮೆ ದರದಲ್ಲಿ ಔಷಧಿಗಳನ್ನು ಒದಗಿಸುವ ಪ್ರಧಾನಮಂತ್ರಿ ಜನ ಔಷಧಿ ಕೇಂದ್ರಗಳನ್ನು ಕಳೆದೊಂದು ದಶಕದಲ್ಲಿ ಕ್ಷೇತ್ರದಲ್ಲಿ ಹೆಚ್ಚಾಗಿ ಆರಂಭಿಸಲಾಗಿದೆ.

**332** ಜನ ಔಷಧಿ ಕೇಂದ್ರಗಳು ಬೆಂಗಳೂರು ನಗರದಾದ್ಯಂತ ಕಾರ್ಯನಿರ್ವಹಿಸುತ್ತಿವೆ






## 4. ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿ

ರೋಗಿಗಳ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗಳಿಗೆ PMNRF ನಿಧಿ ಸಹಾಯಕವಾಗಿದ್ದು, 50,000 ರೂ. ನಿಂದ 3,00,000 ರೂ. ವರೆಗೆ ನೆರವು ದೊರೆಯುತ್ತದೆ.

ಬೆಂಗಳೂರು ಕೇಂದ್ರ ಕ್ಷೇತ್ರದಲ್ಲಿ, ಮಕ್ಕಳು ಸೇರಿದಂತೆ ಒಟ್ಟು 200 ಫಲಾನುಭವಿಗಳಿಗೆ ತುರ್ತು ಚಿಕಿತ್ಸೆಗೆ 2.10 ಕೋಟಿ ರೂ. ನೆರವು ದೊರೆತಿದ್ದು, ಆರೋಗ್ಯದ ಭರವಸೆಯನ್ನು ಹೆಚ್ಚಿಸಿದೆ.

PMNRF
PRIME MINISTER'S
National Relief Fund

## 5. ಆಯುಷ್ಮಾನ್ ಭಾರತ ಪಿಎಂ ಜನ ಆರೋಗ್ಯ ಯೋಜನೆ

ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್‌ಗಳು ವಿತರಣೆ. **3.4 ಲಕ್ಷ**

**2.7 ಲಕ್ಷ** ಉಚಿತ ಚಿಕಿತ್ಸೆ ನೀಡಲಾಗಿದೆ.

ಸರ್ಕಾರದಿಂದ ಚಿಕಿತ್ಸೆಗೆ ನೀಡಿರುವ ಮೊತ್ತ. **₹827 ಕೋಟಿ**

Pradhan Mantri Jan Arogya Yojana
Ayushman Bharat
PM-JAY

ಸಾರ್ವಜನಿಕ ಆರೋಗ್ಯ













# ಬೆಂಗಳೂರಿನಲ್ಲಿ ಮೋದಿ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನ





## ಪಿಎಂ ಸ್ವನಿಧಿ

ಮೇಲಾಧಾರವಿಲ್ಲದೆ ಉದ್ಯೋಗಿಗಳಿಗೆ ವರೆಗೆ ಸಾಲ ನೀಡುವ ಯೋಜನೆ
**Rs. 210,000**

**1.3 lakh**
ನೀಡಿರುವ ಸಾಲಗಳು

**Rs. 164 Cr**
ನೀಡಿರುವ ಒಟ್ಟು ಸಾಲದ ಮೊತ್ತ

## ಪಿಎಂ ಆವಾಸ್ ಯೋಜನೆ

ನಗರದ ಬಡ ಜನರಿಗೆ ಮನೆ ನೀಡುವ ಯೋಜನೆ

**1.4 Lakh**
ಮನೆಗಳ ಮಂಜೂರಾತಿ

**Rs. 3,261 Cr**
ಕೇಂದ್ರ ಸರ್ಕಾರದಿಂದ ಯೋಜನೆಗೆ ನೀಡಿದ ಅನುದಾನ

## ಪಿಎಂ ಜನಧನ

ಬಡ ಜನರಿಗೆ ಬ್ಯಾಂಕ್ ಖಾತೆ ಸೃಷ್ಟಿಸಿ ಆರ್ಥಿಕ ಉಳಿತಾಯ ಮಾಡುವ ಯೋಜನೆ

ಬ್ಯಾಂಕ್ ಖಾತೆಗಳ ಸೃಷ್ಟಿ
**21.5 lakh**

ಠೇವಣಿಯಾಗಿರುವುದು
**Rs. 86 Cr**

## ಪಿಎಂ ಮುದ್ರಾ ಯೋಜನೆ

ಸಣ್ಣ ಮತ್ತು ಸೂಕ್ಷ್ಮ ಉದ್ಯಮಗಳಿಗೆ ಸಾಲದ ನೆರವು

**7 Lakh**
ಸೃಷ್ಟಿಯಾದ ಖಾತೆಗಳು

ನೀಡಿದ ಸಾಲದ ಮೊತ್ತ
**Rs. 3778.26 Cr**









STAND UP India
Endeavour and prosper

## ಸ್ಟ್ಯಾಂಡ್ ಅಪ್ ಇಂಡಿಯಾ

ಮಹಿಳೆಯರು ಮತ್ತು ಎಸ್‌ಸಿ/ಎಸ್‌ಟಿ ವರ್ಗಕ್ಕೆ ಸಾಲ

**Rs. 724 Cr**
ನೀಡಿರುವ ಸಾಲದ ಮೊತ್ತ

प्रधानमंत्री सुरक्षा बीमा योजना (PMSBY)

## ಪಿಎಂ ಜೀವನ್ ಜ್ಯೋತಿ ಬಿಮಾ ಯೋಜನೆ

ಜೀವ ವಿಮೆ ಸೌಲಭ್ಯ

**Rs. 12.9 Lakh**
ಖಾತೆಗಳ ಸೃಷ್ಟಿ

**Rs. 56.24 Lakh**
ಅನುದಾನ ಮಂಜೂರು



Pradhan Mantri
Jeevan Jyoti Bima Yojana

## ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY)

**Rs. 29.58 Lakh**
ಯೋಜನೆಯಡಿ ಸೃಷ್ಟಿಯಾಗಿರುವ ಖಾತೆಗಳು











ಬಿಜೆಪಿಗೆ ಮತ ನೀಡಿ

#ಮತ್ತೊಮ್ಮೆಮೋದಿಸರ್ಕಾರ